ಕೊಡುವುದು ಇಲ್ಲದಿದ್ದರೆ ಇಲ್ಲ. ಈಗ ತಮಗೆ ನಾನು ಒಂದು ಮಾತನ್ನು ಹೇಳುವುದಾದರೆ ಪಾಲಿಟೆಕ್ನಿಕ್‌ಗಳಿಗೆ ಅರ್ಜಿಗಳು ಬರುತ್ತಲೇ ಕಡಿಮೆಯಾಗಿದೆ.

ಶ್ರೀ ಜಿ. ರಾಜಗೌಡ.—ಇನ್ನು ಮುಂದೆ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಅನುಮತಿ ಕೊಡುವುದಿಲ್ಲ ವೆಂದು ಭರವಸೆ ಕೊಡುತ್ತೀರಾ ? ಈಗಾಗಲೇ ಖಾಸಗಿ ಪಾಲಿಟೆಕ್ನಿಕ್‌ಗಳು ಚಾಸ್ತಿಯಾಗಿವೆ ಇವುಗಳ ಗುಣಮಟ್ಟ ಕಡಿಮೆಯಾಗಿದೆ. ಆದ್ದರಿಂದ ಇನ್ನು ಮುಂದೆ ಖಾಸಗಿಯವರಿಗೆ ಅನುಮತಿ ಕೊಡುವುದಿಲ್ಲ ವೆಂದು ಖಚಿತ ಭರವಸೆ ಕೊಡುತ್ತೀರಾ ?

ಶ್ರೀ ಡಿ. ಮಂಜುನಾಥ್.— ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಅವಕಾಶ ಕೊಡುವುದಿಲ್ಲವೆಂದು ಹೇಳುವುದಕ್ಕೆ ಆಗುವುದಿಲ್ಲ. ಎಲ್ಲಾ ಶಿಕ್ಷಣ ಸಂಸ್ಥೆಗಳನ್ನು ಸರ್ಕಾರದವರೇ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಕೆಲವು ಖಾಸಗಿ ಶಿಕ್ಷಣಸಂಸ್ಥೆಗಳು ಚೆನ್ನಾಗಿ ನಡೆಸುತ್ತಿವೆ. ಒಳ್ಳೆಯ ಗುಣ ಮಟ್ಟವನ್ನು ಕಾಪಾಡಿಕೊಂಡು ಬರುತ್ತಿವೆ ಅಂತಹ ಶಿಕ್ಷಣ ಸಂಸ್ಥೆಗಳಿಗೆ ಪ್ರೋತ್ಸಾಹ ಕೊಡಬಾರದೆಂದು ಹೇಳಿದರೆ ಹೇಗೆ? ಮಾನ್ಯ ಸದಸ್ಯರ ಗಮನಕ್ಕೆ ಮತ್ತೊಂದು ವಿಚಾರವನ್ನು ತರಬಯಸುವುದೇ ನೆಂದರೆ ಕೇಂದ್ರ ಸರ್ಕಾರದ ಹೊಸ ಶಿಕ್ಷಣ ನೀತಿಯ ಪ್ರಕಾರ ನಾವೂ ಸಹ ನಡೆಯಬೇಕಾಗುತ್ತದೆ. ಖಾಸಗಿಯವರು ಚೆನ್ನಾಗಿ ಈ ಸಂಸ್ಥೆಗಳನ್ನು ನಡೆಸಿದರೆ ಅವರಿಗೆ ನಾವು ಪ್ರೋತ್ಸಾಹ ಕೊಡಬೇಕಾ ಗುತ್ತದೆ.

ಅಧ್ಯಕ್ಷರು.— ಪ್ರಶ್ನೆ ಸಂಖ್ಯೆ ೨೧೫. ಮಾನ್ಯ ಸದಸ್ಯರಾದ ಅಜ್ಜಿಬಾಳ ಹೆಗಡೆಯವರ ಪ್ರಶ್ನೆ ಯನ್ನು ಮುಂದೂಡಲಾಗಿದೆ. ಪ್ರಶ್ನೆ ೨೧೬ ಮಾನ್ಯ ಸದಸ್ಯರು ಗೈರು ಹಾಜರಿ.

ಕೃಷಿ ಬೆಳೆಗಳಿಗೆ ನ್ಯಾಯ ಬೆಲೆಗಳನ್ನು ನಿಗದಿಪಡಿಸುವುದು

*೫೦೦. ಶ್ರೀ ಎಂ. ಎಸ್. ಕೃಷ್ಣಪ್ಪ (ರಾಜಾಜಿನಗರ).— ಮಾನ್ಯ ಕೃಷಿ ಹಾಗೂ ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈಗ ಕೃಷಿ ಬೆಳೆಗಳಾದ ಭತ್ತ, ಜೋಳ, ಹತ್ತಿ ಮತ್ತು ಕಬ್ಬುಗಳಿಗೆ ಸರ್ಕಾರದವರು ನಿಗದಿ ಮಾಡಿರುವ ಬೆಲೆಗಳೇನು,

ಆ) ಈ ಬೆಲೆಗಳು ರೈತನ ಉತ್ಪಾದನಾ ವೆಚ್ಚಕ್ಕಿಂತ ಕಡಿಮೆಯಾಗಿರುವುದೂ, ಆದರಿಂದ ರೈತನಿಗೆ ನಷ್ಟವಾಗಿರುವುದೂ ಸರ್ಕಾರದವರ ಗಮನಕ್ಕೆ ಬಂದಿದೆಯೇ,

ಇ) ನ್ಯಾಯವಾದ ಬೆಲೆಗಳನ್ನು ನಿಗದಿಮಾಡಿ ಸರ್ಕಾರವೇ ಕೊಂಡು ವಂಧ್ಯವರ್ತಿಗಳಿಲ್ಲದೆ, ಬೇರೆಯವರಿಗೆ ಮಾರಲು ಸರ್ಕಾರದವರು ಯೋಚಿಸಿದ್ದಾರೆಯೆ,

ಈ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕೆ ರಾಜ್ಯ ಸಚಿವರು). —

ಅ) ಭಾರತ ಸರ್ಕಾರವು ೧೯೮೬–೮೭ನೇ ಸಾಲಿಗೆ ಈ ಕೆಳಕಂಡಂತೆ ಬೆಂಬಲ ಬೆಲೆಯನ್ನು ನಿಗದಿ ಪಡಿಸಿದೆ.

		ರೂ. ಕ್ವಿಂಟಾಲ್ ಒಂದಕ್ಕೆ
ಭತ್ತ:	ಆತಿ ಸಣ್ಣ	೧೫೪–೦೦
	ಸಣ್ಣ	೧೫೦–೦೦
	ಸಾಮಾನ್ಯ	೧೪೬–೦೦
ಜೋಳ .		೧೩ –೦೦
ಹತ್ತಿ)	೧) ಡಿಸಿಹೆಚ್-೩೨	೬೦೫–೦೦
	೨) ಪರಲಕ್ಷ್ಮಿ	೫೭೭–೦೦
	೩) ಹೆಚ್–೪	೫೪೦–೦೦
	೪) ಲಕ್ಷ್ಮಿ	೪೪೫–೦೦
	೫) ಸುಯೋಧರ	೪೧೦–೦೦
	೬) ಜಯಧರ	೪೨೦–೦೦
ಕಬ್ಬು :	೧) ಕೇಂದ್ರ ಸರ್ಕಾರವು ನಿಗದಿ ಪಡಿಸಿರುವ ಬೆಂಬಲ ಬೆಲೆ ಮೆಟ್ರಿಕ್ ಟನ್ ಒಂದಕ್ಕೆ ರೂ. ೧೭೦–೦೦	
	೨) ರಾಜ್ಯ ಸರ್ಕಾರವು ನಿಗದಿಪಡಿಸಿರುವ ಬೆಂಬಲ ಬೆಲೆ ರೂ. ೧೯೫–೦೦ (ಸಕ್ಕರೆ ಇಳುವರಿ ಶೇ. ೮.೫ ರಷ್ಟು ಇದ್ದಲ್ಲಿ)	

ಆ) ಕೃಷಿ ಉತ್ಪಾದನೆಗಳ ಹೆಚ್ಚಿನ ವೆಚ್ಚದ ವಿಷಯವನ್ನು ರೈತರು ಪ್ರಸ್ತಾಪಿಸುತ್ತಿರುತ್ತಾರೆ. ಕೇಂದ್ರ ಸರ್ಕಾರ ರಚಿಸಿದ ಕೃಷಿ ಉತ್ಪನ್ನ ವೆಚ್ಚ ಮತ್ತು ಬೆಲೆಯ ಆಯೋಗವು ಬೆಂಬಲ ಬೆಲೆಯನ್ನು ಶಿಫಾರಸ್ಸು ಮಾಡುವಾಗ ಉತ್ಪಾದನಾ ವೆಚ್ಚವನ್ನು ಪರಿಗಣಿಸುವುದು.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್ — ಮಾನ್ಯ ಅಧ್ಯಕ್ಷರೇ, ನಾನು ಕೇಳಿರುವ 'ಆ' ಪ್ರಶ್ನೆಯಲ್ಲಿ ರೈತನ ಉತ್ಪಾದನಾ ವೆಚ್ಚಕ್ಕಿಂತ ಅವರು ಮಾರುವ ಬೆಲೆಗಳು ಕಡಿಮೆ ಇರುವುದರಿಂದ ರೈತನಿಗೆ ನಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದರೆ. ಅದಕ್ಕೆ ಮಾನ್ಯ ಸಚಿವರು ನೇರವಾದ ಉತ್ತರವನ್ನು ಏಕೆ ಕೊಟ್ಟಿಲ್ಲ? ಸರ್ಕಾರದವರು ಬೆಲೆಗಳನ್ನು ನಿಗದಿ ಮಾಡುತ್ತಾರೆಂದು ಹೇಳಿದ್ದೀರಿ. ಕೇಂದ್ರ ಸರ್ಕಾರ ಬೆಲೆ ನಿಗದಿ ಮಾಡುವುದು ನಮಗೆ ಗೊತ್ತಿದೆ. ಬೆಲೆಗಳನ್ನು ನಿಗದಿ ಮಾಡಿರುವುದು, ಉತ್ಪಾದನಾ ವೆಚ್ಚಕ್ಕೂ ಹಾಗೂ ಬೆಲೆಗಳಿಗು ಅಂತರ ಇದೆಯೇ ಎಂಬುದು ತಮ್ಮ ಅಭಿಪ್ರಾಯಕ್ಕೆ ಬಂದಿದೆಯೇ?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.— ಬೆಲೆ ನಿಗದಿ ಮಾಡುವುದಕ್ಕೆ ಕೇಂದ್ರ ಸರ್ಕಾರದವರಿಗೆ ನಾವು ಶಿಫಾರಸ್ ಮಾಡುತ್ತೇವೆ ಆಪ್ಕೇ ಉತ್ಪಾದನಾ ವೆಚ್ಚಕ್ಕಿಂತ ಬೆಲೆಗಳು ಕಡಿಮೆಯಾದರೆ ರೈತನಿಗೆ ನಷ್ಟವಾಗುತ್ತದೆ. ಆಗ ಸರ್ಕಾರದವರು ಬೆಲೆಯನ್ನು ನಿಗದಿ ಮಾಡುತ್ತಾರೆ. ಇದು ಕೇಂದ್ರ ಸರ್ಕಾರಕ್ಕೆ ಸಂಬಂಧ ಪಟ್ಟದ್ದಾದು.

ಶ್ರೀ ಎಂ. ಎಸ್. ಕೃಷ್ಣನ್ — ರೈತನಿಗೆ ಇವತ್ತಿನ ದಿವಸ ನಷ್ಟವಾಗುತ್ತಿದೆ. ರೈತನಿಗೆ ನಷ್ಟವಾಗಬಾರದೆಂದು ಬೆಲೆಗಳನ್ನು ಜಾಸ್ತಿ ನಿಗದಿ ಮಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ ಮಾಡಿದ್ದೀರಾ? ನಮ್ಮ ರಾಜ್ಯದಲ್ಲಿ ಎಷ್ಟು ಬೆಲೆ ಇರಬೇಕು? ಯಾವ ರೀತಿ ಇರಬೇಕು ಎಂಬ ಬಗ್ಗೆ ಸರ್ವೆ ಮಾಡಿದ್ದೀರಾ? ಇದರ ಬಗ್ಗೆ ಸ್ಪಷ್ಟವಾದ ಉತ್ತರ ಕೊಡಬೇಕು.

ಶ್ರೀ ಬಸವರಾಜ ಪಾಟೀಲ್ ಅನ್ವರಿ.— ಮಾನ್ಯ ಶಂಕರಿಕೊಪ್ಪ ಅವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಮಾಡಿದ್ದೇವೆ ಆ ಕಮಿಟಿಯವರು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಬೆಲೆಗಳನ್ನು ನಿಗದಿ ಮಾಡುವ ಬಗ್ಗೆ ಶಿಫಾರಸ್‌ನ್ನು ಮಾಡಿದ್ದಾರೆ, ಭತ್ತಕ್ಕೆ ರೈತರಿಗೆ ಸಂಪಾರು ಒಂದು ಕ್ವಿಂಟಾಲ್‌ಗೆ ೧೪೭ ರೂಪಾಯಿ ಉತ್ಪಾದನಾ ವೆಚ್ಚವಾಗುತ್ತದೆ, ಅದಕ್ಕೆ ನಾವು ೧೭೦ ರೂಪಾಯಿಗಳನ್ನು ಕೊಡ ಬೇಕೆಂದು ನಿಗದಿ ಮಾಡುವುದಕ್ಕೆ ಶಿಫಾರಸ್ ಮಾಡಿದ್ದೇವೆ. ಜೋಳಕ್ಕೆ ೧೫೭ ರೂಪಾಯಿಗಳು ಖರ್ಚಾಗು ತ್ತದೆ. ಇದಕ್ಕೆ ೧೯೮ ರೂಪಾಯಿಗಳಿಗೆ ಶಿಫಾರಸ್ ಮಾಡಿದ್ದೇವೆ. ಹತ್ತಿಗೆ ೪೫೫ ರೂಪಾಯಿಗಳಿಗೆ ಶಿಫಾರಸ್ ಮಾಡಿದ್ದೇವೆ. ಉತ್ತಮ ಹತ್ತಿಗೆ ೫೨೩ ರೂಪಾಯಿಗಳಿಂದ ೬೦೦ ರೂಪಾಯಿಗಳವರೆಗೆ ಶಿಫಾರಸ್ ಮಾಡಿದ್ದೇವೆ. ಕಬ್ಬಿಗೆ ೨೦೨ ರೂಪಾಯಿಗಳಿಂದ ೨೩೭ ರೂಪಾಯಿಗಳಿಗೆ ಶಿಫಾರಸ್ ಮಾಡಿ ದ್ದೇವೆ. ಈ ಶಿಫಾರಸ್‌ಗಳನ್ನೆಲ್ಲಾ ದಿನಾಂಕ ೧೮-೨-೬೭ರಂದು ಕೇಂದ್ರ ಸರ್ಕಾರಕ್ಕೆ ನಾವು ಕಳುಹಿಸಿ ಕೊಟ್ಟಿದ್ದೇವೆ.

ಶ್ರೀ ಕೆ. ಹೆಚ್. ಪಾಟೀಲ್.— ಮಾನ್ಯ ಶಂಕರಿಕೊಪ್ಪ ಅವರ ಕಮಿಟಿಯನ್ನು ನೇಮಕ ಮಾಡಿ ದ್ದೀರಲ್ಲಾ, ಈ ಕಮಿಟಿಯವರು ನಿಗದಿ ಮಾಡಿದ ಬೆಲೆಗೆ ನಿಮ್ಮ ಸರ್ಕಾರದವರು ಕೊಂಡುಕೊಳ್ಳಬೇಕೆಂದು ನಿರ್ಧಾರ ಮಾಡಿದ್ದೀರಾ ಅಥವಾ ಬೆಲೆಗಳನ್ನು ನಿಗದಿ ಮಾಡಿ ಕೇಂದ್ರ ಸರ್ಕಾರದವರು ಕೊಂಡುಕೊಳ್ಳಲಿ ಎಂದು ಶಿಫಾರಸ್ ಮಾಡಿದ್ದೀರಾ? ಕೇಂದ್ರದವರೇ ಕೊಂಡುಕೊಳ್ಳಬೇಕು, ರಾಜ್ಯ ಸರ್ಕಾರದವರು ಕೊಂಡುಕೊಳ್ಳಬಾರದೆಂದು ಏನೂ ಇಲ್ಲ. ರೈತಾಪಿ ಜನರ ಹಿತಕ್ಕಾಗಿ ಅನೇಕ ವಸ್ತುಗಳನ್ನು ಸರ್ಕಾರದವರು ಕೊಂಡುಕೊಂಡರೆ ನಿಜವಾಗಿ ರೈತರಿಗೆ ಕಲ್ಯಾಣವಾಗುತ್ತದೆ. ಆ ದಿಸೆಯಲ್ಲಿ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ?

ಶ್ರೀ ಬಸವರಾಜ ಪಾಟೀಲ್ ಅನ್ವರಿ —ಇವು ಕೃಷಿ ಇಲಾಖೆ ಖರೀದಿ ಮಾಡುವ ವ್ಯಾಪ್ತಿಯಲ್ಲಿ ಬರುವುದಿಲ್ಲ. ಬೇರೆ ಏಜೆನ್ಸಿಗಳ ವ್ಯಾಪ್ತಿಗೆ ಬರುತ್ತದೆ. ಆದರೂ ಸರ್ಕಾರ ಇದನ್ನು ಪರಿಶೀಲಿಸಿ ಅನೇಕ ಕ್ರಮ ತೆಗೆದುಕೊಂಡಿದೆ.

ಶ್ರೀ ಎಂ ಎಸ್. ಕೃಷ್ಣನ್.—ಸರ್ಕಾರ ಕೊಂಡುಕೊಳ್ಳುವ ವ್ಯವಸ್ಥೆ ಹೊಂದಿದೆ ಎಂದು ಹೇಳಿ ದಿರಿ. ಆದರಂತೆ ಸಪೋರ್ಟ್ ಬೆಲೆಗಿಂತ ಕಡಿಮೆ ಬೆಲೆ ಆದರೆ ಅಂಥಾ ಸಾಮಗ್ರಿಗಳನ್ನು ರೈತನಿಂದ ಸರ್ಕಾರವೇ ಎಲ್ಲವನ್ನೂ ಕೊಂಡು ನಗರಗಳಲ್ಲಾಗಲೀ ಗ್ರಾಮಾಂತರಗಳಲ್ಲಾಗಲೀ ವಿತ್ರಿಯಿಸುವ ವ್ಯವಸ್ಥೆ ಮಾಡಂತ್ತೀರಾ ? ಇದರಿಂದ ನ್ಯಾಯವಾದ ಬೆಲೆ ರೈತನಿಗೂ, ಜನಗಳಿಗೂ ಸಿಕ್ಕಿದಂತಾಗುತ್ತದೆ.

ಶ್ರೀ ಬಸವರಾಜ ಪಾಟೀಲ್ ಅನ್ವರಿ —ಇದಕ್ಕೆ ಸಿ.ಸಿ.ಐ. ಮತ್ತು ಫೆಡರೇಷನ್‌ಗಳ ಮೂಲಕ ರೈತರಿಗೆ ಕಡಿಮೆ ಬೆಲೆ ಇದ್ದಾಗ ಜಾಸ್ತಿ ಬೆಲೆ ಕೊಡುವ ವ್ಯವಸ್ಥೆ ಇದೆ. ಅಲ್ಲದೆ ಮಾರುಕಟ್ಟೆಯಲ್ಲೇ ಈಗ ಬೆಲೆ ಜಾಸ್ತಿ ಇರುವುದರಿಂದ ಅಂಥ ಪರಿಸ್ಥಿತಿ ಬರುವುದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ —ಮಾನ್ಯ ಮಂತ್ರಿಗಳು ಹೇಳಿದ ಹಲವಾರು ಬೆಲೆಗಳ ಬಗ್ಗೆ ಅವುಗಳನ್ನು ನಿರ್ಧರಿಸಲು ಯಾವುದಾದರೂ ಸೈಂಟಿಫಿಕ್ ಬೇಸಿಸ್ ಇದೆಯೇ ? ಎಷ್ಟು ಧಾನ್ಯವನ್ನು ಬೆಳೆಯಲು ರೈತ ಎಷ್ಟು ಖರ್ಚು ಮಾಡಬೇಕಾಗುತ್ತದೆ ಎಂಬ ಸರ್ವೆ ಏನಾದರೂ ನಡೆದಿದೆಯೇ ? ಜೊತೆಗೆ ಶಂಕರಿಕೊಪ್ಪ ರಿಪೋರ್ಟ್ ಪ್ರಕಾರ ಕಬ್ಬಿಗೆ ಟನ್ನಿಗೆ ೨೪೨ ರೂಪಾಯಿಗಳು ರೆಕಮೆಂಡ್ ಆಗಿದ್ದರೆ ಮಾರುಕಟ್ಟೆಯಲ್ಲಿ ೨೫೦ ರೂಪಾಯಿಗಳು ಇದೆ. ಹೀಗಿರುವಾಗ ೨೪೨ ರೂಪಾಯಿಗಳಿಗೆ ಕಬ್ಬನ್ನು ಬೆಳೆದುಕೊಡಲು ಯಾರೂ ಮುಂದೆ ಬರುವುದಿಲ್ಲ. ಈ ರೀತಿ ವಾಸ್ತವಿಕ ಬೆಲೆಗಿಂತ ಕಮಿಷನ್ನಿನ ಬೆಲೆ ನಿರ್ಣಯವಿರಲು ಕಾರಣಗಳೇನು ?

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ನಾನು ಆಗಲೇ ಹೇಳಿದಂತೆ ಭತ್ತ ಬೆಳೆಯಲು ರೈತರಿಗೆ ೧೪೭.೭೦ ರೂಪಾಯಿಗಳು ಆಗುತ್ತದೆ, ಜೋಳ ಬೆಳೆಯಬೇಕಾದರೆ ೧೫೦ ರೂಪಾಯಿಗಳು ಆಗುತ್ತದೆ. ಅಂದರೆ ವಕ್ಕಲುತನದ ಕೂಲಿ ಕೊಡುವುದಕ್ಕೋ ಗೊಬ್ಬರಕ್ಕೋ ಈ ಹಣ ಖರ್ಚಾಗಿರಬಹುದಾಗಿ. ಇದನ್ನು ಗಮನದಲ್ಲಿಟ್ಟುಕೊಂಡು ೧೫% ರಿಂದ ೨೦ ಪರ್ಸೆಂಟ್ ಮಾರ್ಜಿನ್ ಇಟ್ಟು ಸಮಿತಿ ಶಿಫಾರಸ್ ಮಾಡಿದೆ.

ಶ್ರೀ ಕೆ. ಹೆಚ್. ಪಾಟೀಲ್.—ಸಿ. ಸಿ. ಐ. ಮತ್ತು ಫೆಡರೇಷನ್‌ಗಳ ವ್ಯವಹಾರಕ್ಕೂ ಸದಸ್ಯರು ಕೇಳಿರುವ ಪ್ರಶ್ನೆಗೂ ಸಂಬಂಧವಿಲ್ಲ. ಶಂಕರಿಕೊಪ್ಪ ಕಮಿಟಿಯ ಶಿಫಾರಸುಗಳನ್ನೆಲ್ಲ ಸರ್ಕಾರ ಒಪ್ಪಿ ದೆಯೇ ? ಹಾಗಿದ್ದಲ್ಲಿ ಅವನ್ನು ಇಂಪ್ಲಿಮೆಂಟ್ ಮಾಡಲಿಕ್ಕೆ ಸರ್ಕಾರ ಏನೇನು ಕ್ರಮ ಕೈಗೊಂಡಿದೆ ?

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಶಂಕರಿಕೊಪ್ಪ ಅವರ ಕಮೀಷನ್ನಿನ ರಿಪೋರ್ಟನ್ನು ಈಗಾಗಲೇ ಕೇಂದ್ರಕ್ಕೆ ಕಳಿಸಿಕೊಡಲಾಗಿದೆ. ಸಿ. ಸಿ. ಐ. ಮತ್ತು ಫೆಡರೇಷನ್‌ಗಳ ಉದ್ದೇಶವೇನೆಂದರೆ ರೈತನಿಗೆ ಬೆಲೆ ಕಡಿಮೆ ಆದಾಗ ಈ ಸಂಸ್ಥೆಗಳು ಸಪೋರ್ಟ್ ಬೆಲೆ ಕೊಟ್ಟು ಕೊಂಡುಕೊಳ್ಳುವುದು. ಈಗಲೂ ಈ ಸದನದ ಸದಸ್ಯರ ಸಲಹೆಗಳನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಸಿ. ಭೈರೇಗೌಡ.—ಅಧ್ಯಕ್ಷರೇ, ಕೃಷಿ ಇಲಾಖೆಯಲ್ಲಿ ಕೆಲವು ಫಾರ್ಮಗಳಿವೆ. ಹಾಗೆಯೇ ಕೃಷಿ ವಿಶ್ವವಿದ್ಯಾಲಯದಲ್ಲೂ ಕೆಲವು ಫಾರ್ಮಗಳಿವೆ. ಅಲ್ಲಿ ತಲಾ ಟನ್ನಿಗೆ ಸರ್ಕಾರಕ್ಕೆ ತಗಲುವ ಬೆಲೆಯನ್ನೆ ಹೊರಗಡೆ ಸ್ವಂತ ಬೆಳೆಯುವ ರೈತರಿಗೂ ಕೊಡಲು ಸರ್ಕಾರ ಸಿದ್ಧವೇ ? ಶಂಕರಿಕೊಪ್ಪ ಕಮೀಷನನ್ನು ನೇಮಿಸಿದ್ದು ರಾಜ್ಯ ಸರ್ಕಾರ. ಅದೇ ರೀತಿ ರಾಜ್ಯ ಸರ್ಕಾರ ನೇಮಿಸಿದ ಇನೇ ಪೇ ಕಮಿಷನ್ನಿನ ರಿಪೋರ್ಟನ್ನು ಸರ್ಕಾರ ಅದು ವರದಿ ಒಪ್ಪಿಸಿದ ದಿವಸವೇ ಹೇಗೆ ಒಪ್ಪಿಕೊಂಡು ಸರ್ಕಾರಿ ನೌಕರರಿಗೆ ಸಂಬಳ ಜಾಸ್ತಿ ಮಾಡಲು ೨೦೦ ಕೋಟಿ ರೂಪಾಯಿಗಳನ್ನು ವಿಚ್ರ್ ಮಾಡಲು ತೀರ್ಮಾನಿಸಿತೋ ಅದೇ ರೀತಿ ಶಂಕರಿಕೊಪ್ಪ ರಿಪೋರ್ಟನ್ನೂ ಏಕೆ ಸರ್ಕಾರ ಒಪ್ಪಿಕೊಳ್ಳಲಿಲ್ಲ ? ಅದನ್ನು ಕೇಂದ್ರಕ್ಕೆ ಕಳಿಸಂವ ಅವಶ್ಯಕತೆ ಆದರೂ ಏನಿತ್ತು ? ನೀವೇ ತೀರ್ಮಾನ ತೆಗೆದುಕೊಳ್ಳಬಹುದಿತ್ತಲ್ಲ ?

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಮಾನ್ಯ ಅಧ್ಯಕ್ಷರೇ, ಶಾಸಕರಿಗೆ ರೈತರ ಬಗ್ಗೆ ಇರುವ ಕಳಕಳಿಯನ್ನು ನಾನೂ ಕೂಡ ಒಪ್ಪುತ್ತೇನೆ. ಬೆಲೆ ನಿಗದಿಪಡಿಸತಕ್ಕಂಥಾದ್ದು ಕೇಂದ್ರ ಸರಕಾರದ ವ್ಯಾಪ್ತಿಗೆ ಬರುತ್ತದೆ, ರಾಜ್ಯ ಸರಕಾರ ಅದರ ಬಗ್ಗೆ ಹೆಚ್ಚು ಶಿಫಾರಸ್ಸು ಮಾಡಬಹುದು ಕಾವು ಹೇಳತಕ್ಕಂಥಾದ್ದನ್ನು ಸರಕಾರದ ಗಮನಕ್ಕೆ ತರುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ —ಮಾನ್ಯ ಸಚಿವರ ಉತ್ತರ ಸ್ಪಷ್ಟವಾಗಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನನಗೆ ಪ್ರಶ್ನೆ ಕೇಳಲು ಇನ್ನೊಂದು ಚಾನ್ಸ್ ಕೊಡಿ.

ಅಧ್ಯಕ್ಷರು.—ನಿಮಗೆ ಮೂರು ಸಲ ಚಾನ್ಸ್ ಕೊಟ್ಟಿದ್ದೇನೆ.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಕೃಷಿ ವಿಶ್ವವಿದ್ಯಾನಿಲಯದಲ್ಲಿ ಆಗತಕ್ಕಂತಹ ವ್ಯತ್ಯಾಸದ ಮಾಹಿತಿ ಕೇಳಿದ್ದಾರೆ ನನ್ನ ಹತ್ತಿರ ಆ ವಿವರ ಇಲ್ಲ. ಶಂಕರಿಕೊಪ್ಪ ಕಮಿಟಿ ವರದಿ ಏನಿದೆ ಅದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಸರ್ಕಾರ ಕೇಂದ್ರಕ್ಕೆ ಶಿಫಾರಸ್ ಮಾಡಿದೆ.

ಶ್ರೀ ವೀರಪ್ಪ ಮೊಯಿಲಿ.—ಸನ್ಮಾನ್ಯ ಸದಸ್ಯರಾದಂತಹ ಕೃಷ್ಣನ್‌ರವರು ಕೇಳಿದ ಪ್ರಶ್ನೆಗೂ ಮಾನ್ಯ ಕೃಷಿ ಸಚಿವರು ನೀಡಿದ ಉತ್ತರಕ್ಕೂ ಸಂಬಂಧವಿಲ್ಲವೆಂದು ನನಗನ್ನಿಸುತ್ತದೆ. ಮಿನಿಮಮ್ ಪೈಸ್ ಅನ್ನು ಅಗ್ರಿಕಲ್ಚರ್‌ನವರು ಫಿಕ್ಸ್ ಮಾಡುತ್ತಾರೆ ಅದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟದ್ದು ಅವರು ಕೇಳುತ್ತಿರುವುದು ಸಪೋರ್ಟ್ ಪ್ರೈಸ್ ಬಗ್ಗೆ. ಅವರು ಫಿಕ್ಸ್ ಮಾಡುವುದಕ್ಕೂ ಸಪೋರ್ಟ್ ಪ್ರೈಸ್‌ಗೂ ವ್ಯತ್ಯಾಸವಿದೆ ಉದಾಹರಣೆಗೆ ಹೇಳುವುದಾದರೆ ಷುಗರ್‌ಕೇನ್‌ಗೆ ಹೈ ಪವರ್ ಕಮಿಟಿ ಇದೆ ಮಾನ್ಯ ಮಂತ್ರಿಯವರು ಅದಕ್ಕೆ ಅಧ್ಯಕ್ಷರಾಗಿದ್ದು ಪ್ರತಿ ವರ್ಷ ಸಪೋರ್ಟ್ ಪ್ರೈಸ್ ಅನ್ನು ನಿರ್ಣಯ ಮಾಡುತ್ತಾರೆ. ಅಗ್ರಿಕಲ್ಚರ್ ಪ್ರೈಸ್ ಕಮೀಷನ್‌ನವರು ನಿರ್ಣಯ ಮಾಡಿದಂತಹ ರೇಟ್ ಇರುವುದಿಲ್ಲ ಇನ್ನೂ ಹೆಚ್ಚು ಇರುತ್ತದೆ ಒಂದೊಂದು ರಾಜ್ಯಕ್ಕೆ ಸಂಬಂಧಪಟ್ಟಂತೆ ಸಪೋರ್ಟ್ ಪ್ರೈಸ್ ಅನ್ನು ಫಿಕ್ಸ್ ಮಾಡುತ್ತಾರೆ, ಇದು ಕಬ್ಬಿಗೆ ಮಾತ್ರ ಸೀಮಿತವಾಗಬಾರದು ಮಾನ್ಯ ಮುಖ್ಯಮಂತ್ರಿಯವರ ಅಥವಾ ತಮ್ಮ ಅಧ್ಯಕ್ಷತೆಯಲ್ಲಿ ಜೋಳ, ಭತ್ತ, ಹತ್ತಿ ಮಂಡಕಾದಕ್ಕೆ ಕೂಡ ಅನ್ವಯಿಸುವಂತೆ ಒಂದು ಸಮಿತಿಯನ್ನು ನೇಮಿಸಿ ಷುಗರ್ ಕೇನ್‌ಗೆ ಯಾವ ರೀತಿ ಸಪೋರ್ಟ್ ಪ್ರೈಸ್ ಫಿಕ್ಸ್ ಮಾಡುತ್ತೀರಿ ಅದೇ ರೀತಿ ಮಾಡಬಹುದು. ರಿಸರ್ವ್ ಬ್ಯಾಂಕ್ ಮೂಲಕ ಪರ್ಮಿಷನ್ ತೆಗೆದುಕೊಂಡು ಆಯಾ ಸಂಸ್ಥೆಗಳಿಗೆ ಹಣವನ್ನು ಒದಗಿಸಿ ಸಪೋರ್ಟ್ ಪ್ರೈಸ್ ಫಿಕ್ಸ್ ಮಾಡುತ್ತೀರಾ ಎಂದು ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದು. ತಾವು ಹೇಳುತ್ತಿರುವುದು ಅಗ್ರಿಕಲ್ಚರ್ ಪ್ರೈಸ್ ಬಗ್ಗೆ ಆ ಉತ್ತರ ಬೇಕಾದರೆ ಪಾರ್ಲಿಮೆಂಟ್‌ನಲ್ಲಿ ಪ್ರಶ್ನೆ ಕೇಳುತ್ತಿದ್ದರು ಇಲ್ಲಿ ಅವರು ಆ ಪ್ರಶ್ನೆಯನ್ನು ಕೇಳುತ್ತಿರಲಿಲ್ಲ.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಮಾನ್ಯ ವೀರಪ್ಪ ಮೊಯಿಲಿಯವರ ಸಲಹೆ ಬಹಳ ಸಮಂಜಸವಾಗಿದೆ ಅದನ್ನು ಸರಕಾರ ಪರಿಶೀಲನೆ ಮಾಡುತ್ತದೆ.

ಪ್ರಶ್ನೆ, ೬೬೦

(ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)